ಮಂಗಳೂರಿನಲ್ಲಿರುವ ವಿಮಾನ ಹಾರಾಟ ತರಬೇತಿ ಶಾಲೆ

೪೧೦. ಶ್ರೀ ಬ್ಲೇಸಿಯಸ್ ಎಂ.ಡಿಸೋಜ (ಮಂಗಳೂರು).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನಲ್ಲಿ ವಿಮಾನ ಹಾರಾಟ ತರಬೇತಿ ಶಾಲೆಯನ್ನು ನಿಲುಗಡೆಗೊಳಿಸಲು ಕಾರಣವೇನು ?

ಆ) ಈ ತರಬೇತಿ ಶಾಲೆಯನ್ನು ಪುನರ್ ಪ್ರಾರಂಭಿಸುವ ಯೋಚನೆ ಸರ್ಕಾರಕ್ಕಿದೆಯೇ ?

ಇ) ಹಾಗಿದ್ದಲ್ಲಿ ಯಾವಾಗಿನಿಂದ ಪ್ರಾರಂಭಿಸುವರು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ವಿದ್ಯಾರ್ಹತೆ ಹೊಂದಿರುವ ವಿಮಾನ ತರಬೇತಿ ಚಾಲಕರು ಇಲ್ಲದೆ ಇರುವ ಪ್ರಯುಕ್ತ.

ಆ) ಹೌದು, ವಿಮಾನ ತರಬೇತಿ ಚಾಲಕರ ಸೇವೆಯನ್ನು ಪಡೆಯಲು ಕ್ರಮತೆಗೆದುಕೊಳ್ಳಲಾಗುತ್ತಿದೆ.

ಇ) ವಿದ್ಯಾರ್ಹತೆಯುಳ್ಳ ವಿಮಾನ ತರಬೇತಿ ಚಾಲಕರು ದೊರೆತ ಕೂಡಲೇ ಪುನಃ ಪ್ರಾರಂಭಿಸಲಾಗುವುದು.

ಶ್ರೀ ಬಿ. ಎಲ್. ಶಂಕರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಬ್ಲೇಸಿಯಸ್ ಎಂ. ಡಿಸೋಜರವರಿಗೆ ಇಷ್ಟು ಉತ್ತರ ಹೇಳಿದರೆ ಸಮಾಧಾನವಾಗಲಿಕ್ಕೆ ಸಾಧ್ಯವಿಲ್ಲ ಎಂದು ತಿಳಿದು, ಅವರ ಉಪ ಪ್ರಶ್ನೆಗಳನ್ನು ಅವಾಯ್ಡ್ ಮಾಡುವ ದೃಷ್ಟಿಯಿಂದ ಒಂದೆರಡು ಮಾಹಿತಿಗಳನ್ನು ಕೊಡಲಿಕ್ಕೆ ಇಷ್ಟ ಪಡುತ್ತೇನೆ. ದಿನಾಂಕ ೧೪-೧೧-೮೪ರಂದು ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲ್ ಪ್ರಾರಂಭವಾಯಿತು, ಫೆಬ್ರುವರಿ ೧೯೮೫ರವರೆಗೆ ನಡೆಯಿತು, ಅದನ್ನು ಮುಚ್ಚಲಿಕ್ಕೆ ಮುಖ್ಯ ಕಾರಣ ಅಂದರೆ ಪೈಲೆಟ್ ಇನ್‌ಸ್ಟ್ರಕ್ಟರ್ ಯಾರು ಇದ್ದರು ಅವರು ಮಾರ್ಚ್ ೧೯೮೫ರಲ್ಲಿ ರಾಜೀನಾಮೆ ಕೊಟ್ಟಿದ್ದರಿಂದ ಅದನ್ನು ಮುಂಚ್ಚುತಕ್ಕ ಪರಿಸ್ಥಿತಿ ಬಂತು, ಅದನ್ನು ತುಂಬತಕ್ಕ ದೃಷ್ಟಿಯಿಂದ ಬೆಂಗಳೂರಿನಲ್ಲಿ ಇದ್ದವರನ್ನು ಅಲ್ಲಿಗೆ ಹಾಕಲಿಕ್ಕೆ ಪ್ರಯತ್ನ ಮಾಡಿ ಆಕ್ಟೋಬರ್ ೧೯೮೫ರಲ್ಲಿ ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಯೇಷನ್‌ಗೆ ಬರೆದು ಕಳುಹಿಸತಕ್ಕ ಪ್ರಯತ್ನ ಮಾಡಿದ್ದೇವೆ. ಡಿ.ಟಿ.ಸಿ. ಅವರು ಅಪ್ರೂವಲ್ ಕೊಟ್ಟಿಲ್ಲ, ಬೆಂಗಳೂರಿನಲ್ಲಿರತಕ್ಕವರಿಗೆ ಇನ್‌ಸ್ಪೆಕ್ಷನಲ್ ಫ್ಲೈಯಿಂಗ್ ಮತ್ತು ನೈಟ್ ಫ್ಲೈಯಿಂಗ್‌ನಲ್ಲಿ ತರಬೇತಿ ಆಗಿಲ್ಲ ಎಂದು ಪರ್‌ಮಿಷನ್ ಕೊಟ್ಟಿಲ್ಲ. ಅದನ್ನು ಓವರ್‌ಕಮ್ ಮಾಡಲಿಕ್ಕೆ ಜುಲೈ ೧೯೮೬ರಲ್ಲಿ ಭಾರತದ ಎಲ್ಲಾ ಪತ್ರಿಕೆಗಳಲ್ಲಿ ಜಾಹಿರಾತು ಕೊಟ್ಟು ಪೋಸ್ಟ್ ಫಿಲ್ ಅಪ್ ಮಾಡಲಿಕ್ಕೆ ಅರ್ಜಿ ಕರೆದರು. ಆದರೆ ಯಾರೂ ಅರ್ಜಿ ಹಾಕಿಲ್ಲ. ಈದೃಷ್ಟಿಯಿಂದ ಈಗ ತಾ.೧೩-೮-೧೯೮೭ರಲ್ಲಿ ಕರ್ನಾಟಕಕ್ಕೆ ಪಬ್ಲಿಕ್ ಸರ್ವೀಸ್ ಕಮಿಷನ್‌ನವರಿಗೆ ಒಂದು ಪತ್ರವನ್ನು ಬರೆದು ಈ ಹುದ್ದೆಯನ್ನು ತುಂಬತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಂಡಿದ್ದೇವೆ. ಈ ಹುದ್ದೆಯನ್ನು ತುಂಬಿದ ತಕ್ಷಣ ಮಂಗಳೂರಿನಲ್ಲಿ ಫ್ಲೈಯಿಂಗ್ ಸ್ಕೂಲ್‌ನ ಶಾಖೆಯನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆಯೆಂದು ಹೇಳ ಬಯಸುತ್ತೇನೆ.

ಇನ್ನೊಂದು ವಿಚಾರ ಹೇಳುವುದಾದರೆ, ೧೯೮೧ರಲ್ಲಿ ಡಿ.ಟಿ.ಸಿ. ನವರು ೧೮೦೦ ಗಂಟೆಗಳ ಸಬ್ಸಿಡೈಸ್ಡ್ ಫ್ಲೈಯಿಂಗ್ ಹವರ್ಸನ್ನು ಮೊದಲು ಏನು ಕೊಟ್ಟಿದ್ದರು. ಅದನ್ನು ಈಗ ೮೫೦ ಗಂಟೆಗಳಿಗೆ ಇಳಿಸಿರುವುದರಿಂದ ಚಾಲಕರ ತರಬೇತಿಯನ್ನು ಪಡೆಯುವವರ ಇಚ್ಛೆಯನ್ನು ಪೂರೈಸುವುದಕ್ಕೆ ಸರ್ಕಾರಕ್ಕೆ ಕಷ್ಟವಾಗಿದೆ, ಈ ವಿಚಾರವನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬ್ಲೇಸಿಯಸ್ ಡಿ ಸೋಜ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಬೆಂಗಳೂರಿನಿಂದ ಒಬ್ಬ ಇನ್‌ಸ್ಪೆಕ್ಟರ್‌ನ್ನು ಪ್ರೊಮೋಷನ್ ಮೇಲೆ ಅಥವಾ ಟ್ರಾನ್ಸ್‌ಫರ್ ಆದರೂ ಮಾಡಿ ಏತಕ್ಕೆ ಅಲ್ಲಿಗೆ ಕಳುಹಿಸಬಾರದೆಂದು ?

ಶ್ರೀ ಬಿ. ಎಲ್. ಶಂಕರ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ್ದೇನೆ. ಅಲ್ಲಿಗೆ ಒಬ್ಬರನ್ನು ಕಳುಹಿಸುವ ಪ್ರಯತ್ನವನ್ನು ಆಕ್ಟೋಬರ್ ೧೯೮೫ರಲ್ಲಿ ಪ್ರಯತ್ನ ಮಾಡಿದೆವು. ಅವರ ಹೆಸರನ್ನೂ

ಕೂಡ ಹೇಳುತ್ತೇನೆ. ಪಿಂಟೋ ಎಂದು ಅವರ ಹೆಸರು, ಆದರೆ ಇವರಿಗೆ ಶಿ ಡಿಫಿಷಿಯನ್ಸಿ ಇದೆ. ಡಿ.ಟಿ.ಸಿ ಯವರು ಡಿಫಿಷಿಯನ್ಸಿ ಆಫ್ ಫ್ಲೈಯಿಂಗ್ ಎಕ್ಸ್‌ಪೀರಿಯನ್ಸ್ ಎಂದು ಒಂದು ತಕರಾರು ಮಾಡಿದರು. ಡೈರೆಕ್ಟರ್ ಜನರಲ್ ಆಫ್ ಸಿವಿಲಿಯೇಷನ್, ಗೌರ್ನಮೆಂಟ್ ಆಫ್ ಇಂಡಿಯಾದವರು ಒಂದು ನೈಟ್ ಇನ್‌ಸ್ಟ್ರಕ್ಷನ್ ಆಫ್ ಫ್ಲೈಯಿಂಗ್‌ನಲ್ಲಿ ಟ್ರೈನಿಂಗ್ ಆಗಿಲ್ಲ. ಇನ್ನೊಂದು ನೈಟ್ ಫ್ಲೈಯಿಂಗ್‌ನಲ್ಲಿ ಕೂಡ ಟ್ರೈನಿಂಗ್ ಆಗಿಲ್ಲ ಎಂಬುದಾಗಿ ತಕರಾರು ಮಾಡಿದರು. ಈ ಎರಡರಲ್ಲಿ ಅವರು ಈಗ ಟ್ರೈನಿಂಗ್‌ನ್ನು ಪಡೆದರೂ ಕೂಡ ಡಿ.ಟಿ.ಸಿ.ಯವರು ಅಪ್ರೂವಲ್ ಇವರಿಗೆ ಸಿಕ್ಕಿದ ಕೂಡಲೇ ಇದೆ ಪಿಂಟೋರವರನ್ನೇ ಮಂಗಳೂರಿಗೆ ಕಳುಹಿಸುವುದಕ್ಕೆ ನಾವು ತಯಾರಾಗಿದ್ದೇವೆ ತಾ ೧೩-೮-೮೭ರಲ್ಲಿ ನಾವು ಕೆ.ಪಿ.ಎಸ್,ಸಿ.ನವರಿಗೆ ಬರೆದ ಪತ್ರ ಬರೆದಿದ್ದೇವೆ. ಪ್ರೊಮೋಷನ್ ಮೇಲಾದರೂ ಆಗಬಹುದು ಆ ಹುದ್ದೆ ತುಂಬಿದ ತಕ್ಷಣ ಅವರನ್ನು ಮಂಗಳೂರಿನ ಫ್ಲೈಯಿಂಗ್ ಸ್ಕೂಲನ್ನು ತೆರೆಯುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತೆವೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಗದಗಿನ ನಗರ ಸಭೆಯ ಹತ್ತಿ ಮಳಿಗೆಗಳ ಗುತ್ತಿಗೆ ಕೊಡುವುದರ ಬಗ್ಗೆ

೮. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗದಗಿನ ನಗರಸಭೆಯ ೫೫ ಹತ್ತಿ ಮಳಿಗೆಗಳ ಗುತ್ತಿಗೆ ಕೊಡುವುದನ್ನು ಮುಂದೂಡಿರಿ ಬಾರದೆಂದು ಕರ್ನಾಟಕ ಉಚ್ಚ ನ್ಯಾಯಾಲಯವು ೩ ಬಾರಿ ನಿಶ್ಚಯಿಸಿರುವುದು ನಿಜವೇ ?

ಆ) ಉಚ್ಚ ನ್ಯಾಯಾಲಯದ ಆದೇಶದ ಆದೇಶಕ್ಕೆ ವಿರುದ್ಧವಾಗಿ ಆಯುಕ್ತರು ಕ್ರಮ ತೆಗೆದು ಕೊಂಡಿದ್ದಾರೆಯೇ ? ಹಾಗಿದ್ದರೆ ಯಾವ ಕ್ರಮ ?

ಇ) ಸರ್ಕಾರಿ ಆದೇಶ ಸಂಖ್ಯೆ. ಪನಇ ೧೫ ಎಂಐಪಿ ೮೩, ಜುಲೈ ೧೯೮೬ರಲ್ಲಿ ನಗರಾಭಿವೃದ್ಧಿ ಸಚಿವರು ವಿಭಾಗಾಧಿಕಾರಿಗಳಿಗೆ ಆದೇಶಿಸಿರುವುದು ನಿಜವೇ ? ಹಾಗಿದ್ದಲ್ಲಿ ಆದನ್ನು ಅನುಷ್ಠಾನಕ್ಕೆ ತರಲಾಗಿದೆಯೇ ?

ಈ) ನಗರಸಭೆಯ ಅಧ್ಯಕ್ಷರು ತಮ್ಮ ಪತ್ರ ಸಂಖ್ಯೆ. ೨೦೪, ದಿ : ೧೬-೪-೧೯೮೭ರಲ್ಲಿ ಗುತ್ತಿಗೆಗೆ ನೀಡಿರುವ ವ್ಯವಹಾರದಲ್ಲಿ ಲಂಚಗುಳಿತವ ಸಚಿವರ ಗಮನಕ್ಕೆ ತಂದಿದ್ದಾರೆಯೇ ?

ಉ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಬಿ. ಸೋಮಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ. ಇದಕ್ಕೆ ತದನಂತರ ತಡೆಯಾಜ್ಞೆ ನೀಡಲಾಗಿದೆ.

ಈ) ಆ ಪತ್ರ ಸಿಕ್ಕುತ್ತಿಲ್ಲ.

ಉ) ಮೇಲಿನ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ಪ್ರಶ್ನೆಗೆ ಉತ್ತರವನ್ನು ಹೇಳುವಾಗ ಈ ಸದನವನ್ನು ಮತ್ತು ಈ ಕರ್ನಾಟಕವನ್ನು ತಪ್ಪು ದಾರಿಗೆಳೆಯುವಂಥ ಉತ್ತರವನ್ನು ಹೇಳಿದ್ದಾರೆ. ನಾನು ಮೊದಲೇ ಹೇಳಿದ್ದೇನೆ. ಹೈಕೋರ್ಟ್‌ನಿಂದ ಅಲ್ಲ, ಈ ಸಭೆಯಿಂದ ೩ ಸಾರಿ ರೆಫರೆನ್ಸ್ ಆಗಿದೆ. ತಾವು ನೆನಪು ಮಾಡಿಕೊಂಡು ಹೇಳಿ. ಅಧಿಕಾರಿಗಳೇನಾದರೂ ತಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಯೆ ? ತಪ್ಪು ಮಾಹಿತಿಯನ್ನು ಕೊಟ್ಟಿದ್ದರೆ ಇದನ್ನು ಹೆಲ್ಡ್ ಓವರ್ ಮಾಡಿ ನಾಳೆ ಉತ್ತರವನ್ನು ಹೇಳಿ. ಇಲ್ಲದಿದ್ದರೆ ನೀವು ಈ ಸದನವನ್ನು ತಪ್ಪು ದಾರಿಗೆಳೆದ ತಪ್ಪಿಗೆ ನೀವು ಗುರಿಯಾಗುತ್ತೀರಿ.

ಇನ್ನು ಎರಡನೆಯದಾಗಿ ಕಮಿಷನರ್‌ರವರು ಏನಾದರೂ ಕೆಲಸ ಮಾಡಿದ್ದಾರೆಯೇ ಎಂದು ಕೇಳಿರುವುದಕ್ಕೆ ''ಇಲ್ಲ'' ಎಂದು ಹೇಳಿದ್ದೀರಿ. ಕಮಿಷನರ್‌ರವರು ಆರ್ಡರ್ ಮಾಡಿದ್ದಾರೆ ಆದರ